**ಮಾನ್ಯ ಸಿವಿಲ್ ನ್ಯಾಯಾಧೀಶರು ವ ಜೆ ಎಂ ಎಫ್‌ಸಿ ಮುದ್ದೇಬಿಹಾಳ, ಇವರ ನ್ಯಾಯಾಲಯ**

ಸಿ ಸಿ ನಂಃ112/2019
ಸಿಡಬ್ಲೂ-2
ಪಿ.ಡಬ್ಲ್ಯೂ-2

ಸಾಕ್ಷಿದಾರನ ಹೆಸರು : ಪೀಕಪ್ಪ ನಾಯಕ

ತಂದೆಯ ಹೆಸರು ಃ ಚಂದಪ್ಪ

ವಯಸ್ಸು ಃ 72 ವರ್ಷ,,

ಉದ್ಯೋಗ : ಒಕ್ಕಲುತನ

ವಾಸಸ್ಥಳ ಃ ಗಡಿಸೋಮನಾಳ ತಾಂಡಾ

(ದಿಃ17/08/2024 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು)

**ಮುಖ್ಯ ವಿಚಾರಣೆ ಸ ಸ ಅ ಅವರಿಂದ**

ಘಟನೆಯ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ, ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಜರುಗಿಸಿರುವುದಿಲ್ಲ. ಈಗ ಸುಮಾರು 4-5 ವರ್ಷಗಳ ಹಿಂದೆ ನಾನು ನನ್ನ ಜಮೀನಿನಿಂದ ಮರಳಿ ಬರಬೇಕಾದರೆ ಪೋಲಿಸರು ನನ್ನನ್ನು ಕರೆದು ಒಂದು ದಾಖಲೆಗೆ ನಮ್ಮ ತಾಂಡಾದಲ್ಲಿ ಸಹಿಯನ್ನು ಪಡೆದಿರುತ್ತಾರೆ.

ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸುತ್ತಿದ್ದು ಅದರ ಮೇಲೆ ನನ್ನ ಸಹಿ ಇರುತ್ತದೆ, ಅದು ಗುನ್ಹೆ ಜಾಗೆ ಪಂಚನಾಮೆ ಮೇಲೆ ಇರುತ್ತದೆ. ಸದರಿ ಪಂಚನಾಮೆಯನ್ನು ನಿಪಿ: 3 ಎಂದು,. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ: 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಗಿ ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರ್ತಿಸಿದ್ದು, ಸದರಿ ಪೋಟೋವನ್ನು ಈಗಾಗಲೇ ನಿಪಿ 2 ಎಂದು ಗುರ್ತಿಸಲಾಗಿದೆ.

(ಈ ಹಂತದಲ್ಲಿ ಸ ಸ ಅ ಅವರು ಸಾಕ್ಷಿಯನ್ನು ಪ್ರತೀಕೂಲ ಸಾಕ್ಷಿ ಅಂತಾ ಪರಿಗಣಿಸಿ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸ ಸ ಅ ಅವರಿಂದ</u>**

ದಿನಾಂಕ 03-10-2018 ರಂದು ಪೊಲೀಸರು ನನ್ನ ಮತ್ತು ಚಾಸಾ: 3 ರವರ ಸಮಕ್ಷಮ ಮುಂಜಾನೆ 10.00 ರಿಂದ 11.00 ಗಂಟೆಯವರೆಗೆ ಚಾಸಾ: 1 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 2 ನ್ನು ಪಂಚನಾಮೆ ಕಾಲಕ್ಕೆ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ಚಾಸಾ 3 ರವರ ಸಮಕ್ಷಮ ಪಂಚನಾಮೆ ಜರುಗಿಸಿದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಅಂತಾ ತಿಳಿಸಿರುತ್ತಾರೆ,

**<u>ಮರುವಿಚಾರಣೆ ಇಲ್ಲ.</u>**

ಓ ಹೇ ಕೇ ಸರಿ ಅದೆ.

ನ್ಯಾ ದಂ ಪ್ರ ವರ್ಗ, ಮುದ್ದೇಬಿಹಾಳ.